ಬಹುದು. ಆಗ ಅಲ್ಲಿ ವಕೀಲರು ವಾದಿಸಬಹುದು. ಭೂ ಸುಧಾರಣಾ ಕಿದ್ದುಪಡಿ ಕಾಯಿದೆ ೧೯೭೪, ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದಲೇ, ಕೃಷಿ ಕಾರ್ಮಿಕರು, ಭೂಮಾಲೀಕರು, ಯಾವ ಜಾಗದಲ್ಲಿ ವಾಸ ಮಾಡುತ್ತಿದ್ದರು. ಆ ಸ್ಥಳವನ್ನು ೫ ಸೆಂಟಿಗೆ ಮೀರದಂತೆ, ತವಂಗಬೇಕೆಂದು ರಿಜಿಸ್ಟರ್ ಮಾಡಿಕೊಳ್ಳಲು ಕಾಲಾವಧಿಯನ್ನು ದಿನಾಂಕ ೩೧-೧೨-೭೯ರವರೆಗೆ ಕೊಡಲಾಗಿತ್ತು. ಇದನ್ನು ದಿನಾಂಕ ೩೧-೧೨-೮೧ರವರೆಗೆ ವಿಸ್ತರಿಸಲಾಯಿತು. ಪುನಃ ಈ ಕಾಲಾವಧಿಯನ್ನು ದಿನಾಂಕ ೩೧-೩-೮೫ರವರೆಗೆ ವಿಸ್ತರಿಸಲಾಯಿತು. ಈ ತಿದ್ದುಪಡಿ ಕಾಯಿದೆ ೧-೧-೭೯ರಲ್ಲಿ ಜಾರಿಯಾಗಿದ್ದರೂ, ಕರ್ನಾಟಕ ಭೂ ಸುಧಾರಣಾ ಕಾಯಿದೆ ೧೯೬೧ನೇ ಸೆಕ್ಷನ್ ೪೮ರ ಮೇರೆಗೆ ಕೃಷಿ ಕಾರ್ಮಿಕರು ಅರ್ಜಿಯನ್ನು ಬರೆದುಕೊಳ್ಳಲು ಕಾಲಾವಧಿಯನ್ನು ದಿನಾಂಕ ೩೧-೩-೧೯೮೫ರವರೆಗೆ ವಿಸ್ತರಿಸಲಾಯಿತು ಪುನಃ ವಿಸ್ತರಣೆ ಮಾಡುವ ಅವಶ್ಯಕತೆ ಇಲ್ಲ.

(7) ಗಜೇಂದ್ರಗಢ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಧ್ಯಾಪಕರಿಲ್ಲದೆ ತೊಂದರೆಯಾಗಿರುವ ವಿಚಾರ.

ಶ್ರೀ ಜ್ಞಾನಸೇವ ದೊಡ್ಡಮೇಟಿ (ರೋಣ).—ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ರೋಣ ತಾಲ್ಲೂಕು ಗಜೇಂದ್ರಗಢದ ಸರಕಾರಿ ಪ್ರಥಮದರ್ಜೆಯ ಕಾಲೇಜಿನಲ್ಲಿ ಪ್ರಾಧ್ಯಾಪಕರಿಲ್ಲದೆ ಇಂಗ್ಲೀಷ್ ಇತ್ಯಾದಿ ವಿಷಯಗಳ ಬೋಧನೆಗೆ ತೊಂದರೆಯಾಗಿದ್ದು, ಪ್ರಾಚಾರ್ಯರೂ ಕೂಡಾ ಸರಿಯಾಗಿ ಆಡಳಿತ ನಡೆಸದೇ ಇದ್ದುದ್ದು ಅಲ್ಲಿಯ ವಿದ್ಯಾರ್ಥಿ ಸಮೂಹದಲ್ಲಿ ಅಸಂತೋಷವನ್ನುಂಟು ಮಾಡಿದೆ. ತೀವ್ರ ಕ್ರಮ ಕೈಗೊಳ್ಳದಿದ್ದರೆ, ವಿದ್ಯಾರ್ಥಿ ಸಮುದಾಯದಲ್ಲಿನ ಅಸಂತೋಷ ಸ್ಫೋಟಗೊಂಡು ವಿಷಮ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಶ್ರೀ ಡಿ ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ವಿಷಯ ನನ್ನ ಗಮನಕ್ಕೆ ಬಂದಿದೆ. ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಆದೇಶ ಕೊಟ್ಟಿದ್ದೇನೆ. ತಕ್ಷಣ ಇಲ್ಲಿಗೆ ಪ್ರಾಧ್ಯಾಪಕರನ್ನು ನೇಮಕ ಮಾಡುವುದಕ್ಕೆ ಹೇಳಿದ್ದೇನೆ. ಇನ್ನೊಂದು ವಾರದ ಒಳಗೆ ಮಾಡಿಸುತ್ತೇನೆ.

(8) ನಾಡ ಕಛೇರಿ ಅಧಿಕಾರಿಗಳಿಗೆ ವಿಧವಾ ವೇತನ ಮಂಜೂರು ಮಾಡುವ ಅಧಿಕಾರ ಕೊಡುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದ ಗ್ರಾಮಾಂತರ ಪ್ರದೇಶದ ಜನತೆಗೆ ಅನುಕೂಲ ಆಗುವ ಒಂದು ವಿಷಯವನ್ನು ಸರಕಾರದ ಗಮನಕ್ಕೆ ತರಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಕಡೆ ನಾಡ ಕಚೇರಿ ಪ್ರಾರಂಭವಾಗಿದ್ದು ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಕೇವಲ ವೃದ್ಧಾಪ್ಯ ವೇತನ ಮತ್ತು ಅಂಗವಿಕಲರ ವೇತನ ಮಂಜೂರು ಮಾಡುವ ಅಧಿಕಾರ ಕೊಟ್ಟಿದ್ದು, ಬಹು ಪ್ರಮುಖವಾದ ವಿಧವಾ ವೇತನ ಮಂಜೂರು ಮಾಡುವ ಅಧಿಕಾರ ಕೊಟ್ಟಿರುವುದಿಲ್ಲ, ಆದ್ದರಿಂದ ಜನರಿಗಾಗಿರುವ ತೊಂದರೆ ಬಗ್ಗೆ ಸರಕಾರದ ಗಮನ ಸೆಳೆಯು ಬಯಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಸಚಿವರು).—ನಾಡ ಕಚೇರಿ ಅಧಿಕಾರಿಗಳಿಗೆ ಈ ವಿಷಯದಲ್ಲಿ ಕೂಡಾ ಅಧಿಕಾರ ಕೊಡುತ್ತೇನೆ. ಅದರ ಜೊತೆಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡತಕ್ಕಂಥ ವಿಷಯ ಸರಕಾರ ಮುಂದಿದೆ.

(9) ಹಾನಗಲ್ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳ ಮುಂಗಡ ಪತ್ರದಲ್ಲಿ ಬಂದ ನೀರಾವರಿ ಯೋಜನೆಗಳನ್ನು ತೀವ್ರ ಜಾರಿಗೊಳಿಸುವ ಬಗ್ಗೆ

ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದ ಮುಂಗಡಪತ್ರದಲ್ಲಿ ಬಂದ ನೀರಾವರಿ ಯೋಜನೆಗಳಾದ ಅರ್ಲಿಘಾಂ ಲಕ್ಕಮ್ಮಪುರ ಬ್ರಿಡ್ಜ್ ಕಮ್ ಬ್ಯಾರೇಜ್ ಹಾಗೂ ವಾಸನ ಮಕರವಳ್ಳಿ, ತಿಳವಳ್ಳಿ, ಬಸ್ಸಾಪುರ, ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲು ವಿಳಂಬವಾಗುತ್ತಿದ್ದು ರೈತರ ಅವಶ್ಯ ಬೇಡಿಕೆಯಾದ ಈ ಯೋಜನೆಗಳನ್ನು ತೀವ್ರ ಜಾರಿಗೊಳಿಸಲು ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.